ಅರ್ಥವಾಗದ ಮಟ್ಟಕ್ಕೇರಿದಿರುವುದನ್ನು ನಾನು ನೋಡಿದ್ದೇನೆ. ಕೃಷಿ ಜಗತ್ತಿನ ಬಗ್ಗೆ ಕತೆಯೊಂದನ್ನು ನಾನು ಬರೆದರೆ ಕನಿಷ್ಠ ಬೇರೆಯವರು ಓದಿದರೂ ಆ ಜನಕ್ಕೆ ಅರ್ಥವಾಗಬೇಕು. ಆದ್ದರಿಂದಲೇ ಸಂಸ್ಕೃತದಲ್ಲಿ ಬಂದ ಅನೇಕ ಮಹಾಗ್ರಂಥಗಳು ಸಾಮಾನ್ಯ ಓದುಗರಿಗೆ ತಲುಪಲೇ ಇಲ್ಲ. ನಾನೂ ಸೇರಿದಂತೆ ಕುಂ.ವೀ., ನಾ. ಡಿಸೋಜ, ನಾಗತಿಹಳ್ಳಿ ಚಂದ್ರಶೇಖರ, ಮೊಗಳ್ಳಿ ಗಣೇಶ್, ಬಿ.ಎಲ್. ವೇಣು, ವಸುಧೇಂದ್ರ, ನಾಗರಾಜ ವಸ್ತಾರೆ, ಕರಿಗೌಡ ಬೀಚನಹಳ್ಳಿ ಸಾಮಾನ್ಯ ಓದುಗರಿಗೆ ತಲುಪಿದಂತೆ ವೃತ್ತಿಪರ ವಿಮರ್ಶಕರಿಂದ ಗುರುತಿಸಲ್ಪಟ್ಟ ಕತೆಗಾರರು ತಲುಪಲಿಕ್ಕೆ ಸಾಧ್ಯವಾಗಿಲ್ಲ. ಆಯಾ ಕಾಲಘಟ್ಟದಲ್ಲಿ ಬಹುಸಂಖ್ಯಾತ ಓದುಗರಿಗೆ ಯಾವ ಸಾಹಿತಿ ತಲುಪುತ್ತಾನೋ ಅದೇ ಮುಖ್ಯವಾದ ವಿಚಾರ. ಮಾಸ್ತಿಯವರನ್ನು ಕನ್ನಡದ ಆಸ್ತಿ ಎಂದು ಕರೆದರೂ, ಅವರ ಯಾವ ಕತೆಯಲ್ಲೂ ಅಂದಿನ ಇಂಗ್ಲಿಷ್ ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ಗುಲಗಂಜಿಯಷ್ಟೂ ಪ್ರತಿರೋಧ ವ್ಯಕ್ತಪಡಿಸಿರುವುದನ್ನು ಗುರುತಿಸಲು ಸಾಧ್ಯವಾಗಿಲ್ಲ. ಆದರೂ ಕತೆಗಾರರಾಗಿ ಮಾಸ್ತಿ ಗಟ್ಟಿಯಾಗಿ ನಿಲ್ಲಲು ಅವರು ಬರೆಯುತ್ತಿದ್ದ ಕತೆಗಳಲ್ಲಿ ಬಹುತೇಕ ಜನಸಾಮಾನ್ಯರೇ ನಾಯಕ ನಾಯಕಿಯರಾಗಿರುತ್ತಿದ್ದರಲ್ಲದೆ ಅತ್ಯಂತ ಸರಳವಾದ ಶೈಲಿ ಅವರದ್ದಾಗಿತ್ತು.

ಮೊದಲೆಲ್ಲ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದವರು ಅಕಾಡೆಮಿಕ್ ವಲಯದಲ್ಲಿ ಕೆಲಸ ಮಾಡುತ್ತಿದ್ದವರು. ಆದರೆ ಈಗ ಅಂಥ ಸನ್ನಿವೇಶವೇನೂ ಇಲ್ಲ. ಕನ್ನಡದಲ್ಲಿ ಭಿನ್ನ ಅನುಭವ, ವಸ್ತುಗಳುಳ್ಳ ಕತೆಗಳು ಯಥೇಚ್ಛವಾಗಿ ಬರುತ್ತಿವೆ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ನಾನ್ ಅಕಾಡೆಮಿಕ್ ವಲಯದ ಅನೇಕರು ಕಾವ್ಯ, ಕತೆಗಳ ಸೃಷ್ಟಿಯಲ್ಲಿ ತೊಡಗಿದ್ದಾರೆ. ಸರ್ಕಾರಿ ಅಧಿಕಾರಿಗಳು, ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಸೇನೆಯಲ್ಲಿ ಕೆಲಸ ಮಾಡುತ್ತಿರುವವರು, ವಿದ್ಯಾರ್ಥಿ ವರ್ಗದವರು, ವಿದೇಶದಲ್ಲಿ ನೆಲೆಸಿರುವವರು ಇಂದು ಹೆಚ್ಚು ಹೆಚ್ಚಾಗಿ ಬರೆಯುತ್ತಿರುವುದನ್ನು ನೋಡುತ್ತಿದ್ದೇವೆ. ಇಂಥವರು ಬರೆಯುವಾಗ ವಸ್ತು, ವಿನ್ಯಾಸ, ಅನುಭವಗಳು ಭಿನ್ನವಾಗಿರುತ್ತವೆ. ಹಾಗಾಗಿ ಕತೆಗಳಲ್ಲಿ ಹೊಸತನ ರೂಪುಗೊಂಡಿರುತ್ತದೆ. ಕನ್ನಡದಲ್ಲಿ ಇತ್ತೀಚೆಗೆ ಒಳ್ಳೆಯ ಕತೆಗಳೇ ಬರುತ್ತಿಲ್ಲ ಎಂಬ ವಿಮರ್ಶಕರ ಆರೋಪವನ್ನು ನಾನಂತೂ ಸಾರಾಸಗಟಾಗಿ ತಿರಸ್ಕರಿಸುತ್ತೇನೆ.

ನನಗಿನ್ನು ಚನ್ನಾಗಿ ನೆನಪಿದೆ. 1985ರಲ್ಲಿ ನಾನು ಮದ್ದೂರು ತಾಲ್ಲೂಕಿನ ಕೆಸ್ತೂರಿನಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕನಾಗಿದ್ದೆ. 'ಪ್ರಜಾವಾಣಿ'ಗೆ ಕತೆಯೊಂದನ್ನು ಕಳುಹಿಸಿದ್ದೆ. ತಂದೆಯಿಲ್ಲದ ಪ್ರೈಮರಿ ಸ್ಕೂಲಿನ ಹುಡುಗನೊಬ್ಬ ಸ್ವಾತಂತ್ರ್ಯ ದಿನಾಚರಣೆಯ ಧ್ವಜ ವಂದನೆಯಲ್ಲಿ ಪಾಲ್ಗೊಳ್ಳಲು ಯೂನಿಫಾರಂ ಕದ್ದು, ಕಡೆಗೆ ಸಿಕ್ಕಿಬಿದ್ದು ಅವಮಾನಿತನಾಗಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಿಂದ ಹೊರದೂಡಲ್ಪಡುವ ಕಥಾ ವಸ್ತು. ನಮ್ಮೂರಲ್ಲಿ ನಡೆದಿದ್ದ ಘಟನೆಯೊಂದನ್ನು ಆಧಾರವಾಗಿಟ್ಟುಕೊಂಡು ಬರೆದ ಕತೆ ಅದು. ಆ ಕತೆ ಸ್ವಾತಂತ್ರ್ಯ ದಿನಾಚರಣೆಯೊಂದು ಪ್ರಕಟವಾಗಿತ್ತು. ಅಂದು ನಾನು ಚನ್ನಪಟ್ಟಣದಿಂದ ಮದ್ದೂರಿಗೆ ರೈಲಿನಲ್ಲಿ ಬೆಳಿಗ್ಗೆ ಆರೂವರೆ ಸಮಯದಲ್ಲಿ, ಕೆಸ್ತೂರಿನ ಕಾಲೇಜಿಗೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಳ್ಳಲಿಕ್ಕೆಂದು ಹೋಗುತ್ತಿದ್ದೆ. ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯನ್ನು ಓದುತ್ತಿದ್ದ. ಕತೆಯೇನಾದರೂ ಬಂದಿದೆಯೋ ಏನೋ ಎಂದು ಬಗ್ಗಿ ಬಗ್ಗಿ ನೋಡಿದ್ದೆ. 'ಹಾರುತಿಹುದು ಏರುತಿಹುದು ನೋಡು ನಮ್ಮ ಬಾವುಟ' ಪ್ರಕಟವಾಗಿತ್ತು. ನಾನು ಪುಳಕಗೊಂಡಿದ್ದೆ. ಆತ ಪೂರ್ತಿ ಓದಿದ ನಂತರ ಪುರವಣಿಯನ್ನು ನನ್ನ ಕೈಗೆ ಕೊಡುತ್ತಾ 'ತಗಳ್ಳಿ ಸಾರ್ ಆಗ್ಲಿಂದ್ಲೂ ಪೇಪರ್‌ಗೆ ಒದ್ದಾಡ್ತ ಇದ್ದೀರ. ಯಾವೋನೋ ಕೇಶವರೆಡ್ಡಿ ಅಂತೆ. ನನ್ಮಗ